KATK910005902020

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,
ತಿಪಟೂರು.

# ಸಿ.ಸಿ.ನಂ. 178/2020

ಪಿರ್ಯಾದುದಾರರು: ಹೆಚ್.ಸಿ.ನಿಂಗಪ್ಪ,

ವಿರುದ್ಧ

ಆರೋಪಿ : ಮೋಹನ್.ಎಂ.ವಿ. ಬಿನ್ ವೀರಭದ್ರಯ್ಯ,
BIERT, ಬಿ.ಆರ್.ಸಿ. ಕಚೇರಿ, ಐ.ಬಿ. ಹತ್ತಿರ,
ಹಾಲ್ಕುರಿಕೆ ರಸ್ತೆ, ತಿಪಟೂರು ಟೌನ್.

## ಆರೋಪಣೆ

ಶ್ರೀಮತಿ ನೂರುನ್ನೀಸ., ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ಆರೋಪಣಾ ಸಾರಾಂಶವೇನೆಂದರೆ:

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ದಿನಾಂಕ **25.09.2019** ರಂದು ರೂ.**4,00,000/-** ಗಳನ್ನು **1** ತಿಂಗಳ ಒಳಗಾಗಿ ಮರುಪಾವತಿಸುವುದಾಗಿ ತಿಳಿಸಿ ಸಾಲವಾಗಿ ಪಡೆದಿದ್ದು, ಸದರಿ ಸಾಲದ ತೀರುವಳಿ ಸಲುವಾಗಿ ತಿಪಟೂರು ಶಾಖೆಯ, ಬ್ಯಾಂಕ್ ಆಫ್ ಬರೋಡಾ ಬ್ಯಾಂಕಿನ ದಿಃ **20.10.2019** ರ ಚೆಕ್ ನಂ.**036865** ನ್ನು ರೂ.**4,00,000/-** ಗಳಿಗೆ ಪಿರ್ಯಾದಿ ಪರವಾಗಿ ವಿತರಿಸಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ಕನ್ನು ತಿಪಟೂರು ಶಾಖೆಯ ಕೆನರಾ ಬ್ಯಾಂಕಿಗೆ ನಗದೀಕರಣಕ್ಕಾಗಿ ದಿನಾಂಕಃ **31.12.2019** ರಂದು ಸಲ್ಲಿಸಿದಾಗ, ಸದರಿ ಬ್ಯಾಂಕಿನವರು ಚೆಕ್ ದಾರರ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ **(Funds insufficient)** ಎಂದು ತಿಳಿಸಿ ದಿಃ **31.12.2019** ರಂದು ಸದರಿ ಚೆಕ್ಕನ್ನು

ಪಿರ್ಯಾದಿಗೆ ಹಿಂದಿರುಗಿಸಿದ್ದು, ತದನಂತರ ಪಿರ್ಯಾದಿಯವರು ತಮ್ಮ ವಕೀಲರ ಮೂಲಕ ಹಣ ತಗಾದೆ ಮಾಡಿ ದಿಃ **10.01.2020** ರಂದು ನೊಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ನೋಟೀಸ್ ದಿಃ **14.01.2020** ರಂದು ಜಾರಿಯಾಗಿ ಆಗಿರುತ್ತದೆ. ಅದಾದ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲವೆಂದು ತಿಳಿದಿದ್ದರೂ ಸಹ ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ವಿತರಿಸಿದ್ದು, ಸದರಿ ನಿಮ್ಮ ಕೃತ್ಯವು ವ್ಯವಹರಣೀಯ ಲಿಖಿತಗಳ ಅಧಿ ನಿಯಮ ಕಲಂ. **138** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

<u>ಆರೋಪಿಯ ಹೇಳಿಕೆ</u>

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?
ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?
ಉತ್ತರ:-

(ದಿನಾಂಕ: **<u>25.05.2022</u>** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸಹಿ/-
(ನೂರುನ್ನೀಸ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ತಿಪಟೂರು